ತಂತಿ ವಿಳಾಸ: ಯೂನಿರೆಜ್
ದೂರವಾಣಿ ಸಂಖ್ಯೆ.: 2419208/2419361

e-mail: Registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು-570005.

ಸಂಖ್ಯೆ: ಎಸಿ10/250/2018-19 ದಿನಾಂಕ: 09.05.2019

## ಅಧಿಸೂಚನೆ

**ವಿಷಯ:** ಮೈಸೂರು ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದು Specialized /Specified Programಗಳನ್ನು ನಡೆಸುತ್ತಿರುವ ಎಲ್ಲಾ ವಿದ್ಯಾಸಂಸ್ಥೆಗಳು 2019-20ನೇ ಶೈಕ್ಷಣಿಕ ಸಾಲಿನ ಸ್ನಾತಕ/ಸ್ನಾತಕೋತ್ತರ ಪದವಿ ಕೋರ್ಸುಗಳ ಪ್ರವೇಶಾತಿ ಬಗ್ಗೆ.

*****

ಮೈಸೂರು ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದು Specialized/Specified Programಗಳನ್ನು ನಡೆಸುತ್ತಿರುವ ಸಂಸ್ಥೆಗಳು (ಮೈಸೂರು ವಿಶ್ವವಿದ್ಯಾನಿಲಯದ ಭೌಗೋಳಿಕ ವ್ಯಾಪ್ತಿ ಒಳಪಡುವ ವಿದ್ಯಾಸಂಸ್ಥೆಗಳು) 2019-20ನೇ ಶೈಕ್ಷಣಿಕ ಸಾಲಿನ ಸ್ನಾತಕ/ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ಪ್ರವೇಶ ಮಾಡಿಕೊಳಲು ಈ ಕೆಳಕಂಡ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.

| ಕ್ರ.ಸಂ. | | ಸ್ನಾತಕ ಪದವಿ ಪ್ರೋಗ್ರಾಂ | ಸ್ನಾತಕೋತ್ತರ ಪದವಿ ಪ್ರೋಗ್ರಾಂ |
|---|---|---|---|
| 1 | ಕೊನೆಯ ದಿನಾಂಕ ದಂಡ ಶುಲ್ಕವಿಲ್ಲದೆ | ದಿನಾಂಕ: 01.07.2019 | ದಿನಾಂಕ: 10.08.2019 |
| 2 | ರೂ.1000/- ದಂಡ ಶುಲ್ಕದೊಂದಿಗೆ | ದಿನಾಂಕ: 08.07.2019 | - |
| 3. | ರೂ.1500/- ದಂಡ ಶುಲ್ಕದೊಂದಿಗೆ | ದಿನಾಂಕ: 12.07.2019 | - |

ಪು.ತಿ.ನೋ

**ಸೂಚನೆಗಳು:**

1. ಪ್ರವೇಶಾತಿ ಕೊನೆಯ ದಿನಾಂಕಗಳ ನಂತರ ಪ್ರವೇಶ ಮಾಡಿಕೊಳ್ಳಬಾರದೆಂದು ಈಗಾಗಲೆ ಸೂಚಿಸಲಾಗಿದೆ.

2. ಅನುಮೋದನೆಗೊಂಡಿರುವ ವಿಷಯ ಸಮೂಹದ (Combination) ಕೋರ್ಸುಗಳಿಗೆ ಹಾಗೂ ಸಂಖ್ಯಾಮಿತಿಯೊಳಗೆ ಮಾತ್ರ ಪ್ರವೇಶ ನೀಡತಕ್ಕದ್ದು ಮತ್ತು ಪಿ.ಎಂ.ಇ.ಬಿಯಿಂದ ಮಾನ್ಯತೆ ಪಡೆದಿರುವ ಬಗ್ಗೆ ಆದೇಶದ ಪ್ರತಿಯನ್ನು ತಪ್ಪದೇ(ಕಡ್ಡಾಯವಾಗಿ) ಪ್ರವೇಶಾತಿ ಪಟ್ಟಿಯ ಜೊತೆ ಲಗತ್ತಿಸಿರಬೇಕು. ಪ್ರತಿ ಇಲ್ಲವಾದ್ದಲ್ಲಿ, ಪ್ರವೇಶಾತಿ ಅನುಮೋದನೆ ಪಟ್ಟಿಗಳನ್ನು ಸ್ವೀಕರಿಸಲಾಗುವುದಿಲ್ಲ.

3. ರಾಜ್ಯದ ಪಿಯುಸಿ ಮಂಡಳಿ ಹೊರತುಪಡಿಸಿ, ಹೊರ ರಾಜ್ಯದ CBSE/CISCE/NIOS ನವದೆಹಲಿ/ ವಿದೇಶಿ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದಿಂದ ಅರ್ಹತಾ ಪತ್ರವನ್ನು ಪಡೆದ ನಂತರವೇ ಪ್ರವೇಶ ಮಾಡಿಕೊಂಡಿರಬೇಕು. ಈ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. (ವಿಶ್ವವಿದ್ಯಾನಿಲಯದಿಂದ ಪಡೆದಿರುವ ಅರ್ಹತಾ ಪತ್ರಗಳನ್ನು ಪ್ರವೇಶ ಅನುಮೋದನಾ ಪಟ್ಟಿಯ ಜೊತೆ ಕಡ್ಡಾಯವಾಗಿ ಲಗತ್ತಿಸುವುದು).

4. ವಿಶ್ವವಿದ್ಯಾನಿಲಯ ನಿಗಧಿಪಡಿಸಿರುವ ವಿವಿಧ ಶುಲ್ಕಗಳನ್ನು ವಿಶ್ವವಿದ್ಯಾನಿಲಯಕ್ಕೆ ಪಾವತಿಸದಿದ್ದಲ್ಲಿ, ಅಂತಹ ಪ್ರವೇಶಾತಿಗಳನ್ನು ಅನುಮೋದಿಸಲಾಗುವುದಿಲ್ಲ.

   (ಎ). **ನಿಯಮಾನುಸಾರ ಭಾಷಾ ವಿನಾಯಿತಿಗೆ ಅರ್ಹ ವಿದ್ಯಾರ್ಥಿಗಳು ಪ್ರಥಮ ವರ್ಷದ ಪ್ರವೇಶ ಅನುಮೋದನೆಗೆ ಮುನ್ನ (ಪ್ರಥಮ ಸೆಮಿಸ್ಟರ್) ಭಾಷಾ ವಿನಾಯಿತಿಯನ್ನು ಪಡೆದುಕೊಳ್ಳಬೇಕು.**

   **ನಂತರ ಬರುವ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ. (ಕಾಲೇಜಿನ ಮುಖ್ಯಸ್ಥರು ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ಈ ಸಂಬಂಧ ಸಲಹೆ ನೀಡುವುದು).**

5. ವಿದ್ಯಾರ್ಥಿಗಳ ಪ್ರವೇಶ ಪಟ್ಟಿ, ಅಂಕಿ ಅಂಶಗಳ ಪಟ್ಟಿಗಳನ್ನು ಹಾಗೂ ಚಲನ್‌ಗಳ ಪ್ರತಿಗಳನ್ನು ಪ್ರತ್ಯೇಕವಾಗಿ ಸಿದ್ಧಪಡಿಸಿ ಮೂರು ಪ್ರತಿಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕು. ಪ್ರವೇಶಕ್ಕೆ ನಿಗದಿಪಡಿಸಿರುವ ನಮೂನೆಗಳ ಮಾದರಿಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.uni-mysore.ac.inನಲ್ಲಿ ಪಡೆದುಕೊಳ್ಳಲು ಈ ಮೂಲಕ ತಿಳಿಸಿದೆ. ನಮೂನೆಗಳನ್ನು ಭರ್ತಿ ಮಾಡುವಾಗ (ಕಂಪ್ಯೂಟರ್‌ನಲ್ಲಿ ಮುದ್ರಿಸುವಾಗ) **ಫುಲ್‌ಸ್ಕೇಪ್ ಅಳತೆಯ (34ಸೆಂ.ಮಿ.X 42ಸೆಂ.ಮಿ.) ಕಾಗದವನ್ನು ಮಾತ್ರ ಉಪಯೋಗಿಸಬೇಕು** (ಪ್ರಾಂಶುಪಾಲರ ಪತ್ರ, ಶುಲ್ಕ ಪಾವತಿಸಿದ ಚಲನ್‌ಗಳು ಮತ್ತು ವಿವರ ಪಟ್ಟಿ, ವಿದ್ಯಾರ್ಥಿಗಳ ಸಂಖ್ಯಾಮಿತಿ, ಪಿ.ಎಂ.ಇ.ಬಿ ಇಂದ **ಪಡೆದಿರುವ ಮಾನ್ಯತೆ ಪತ್ರ**, ಸರ್ಕಾರಿ ಅಧಿಕೃತ ಆದೇಶ, **ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳ ವಿವರಪಟ್ಟಿ** ಇತ್ಯಾಧಿಗಳನ್ನು ಪ್ರತ್ಯೇಕವಾಗಿ ಸಲ್ಲಿಸುವುದು).

6. ITI/Diploma ಆಧಾರದ ಮೇಲೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ವಿವರವನ್ನು ಪ್ರತ್ಯೇಕ ನಮೂನೆಯಲ್ಲಿ ಅನುಮೋದನೆಗೆ ಸಲ್ಲಿಸಬೇಕು.

7. **ಶುಲ್ಕ ಪಾವತಿಸುವ ವಿಧಾನ:**

ಶುಲ್ಕ ಪಾವತಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಗಳವರೆಗೆ ಪಾವತಿಸಲಾಗಿರುವ ಒಟ್ಟು ಶುಲ್ಕವನ್ನು, ದಂಡ ಶುಲ್ಕ ಒಳಗೊಂಡಂತೆ ಪ್ರವೇಶಾತಿ ಕಡೆಯ ದಿನಾಂಕದ ನಂತರ ಸಂಬಂಧಪಟ್ಟ ಸಹೋದ್ಯಮ ಕೋರ್ಸ (Collaboration Courses) ಖಾತೆಗೆ ಜಮಾ ಆಗುವಂತೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿನ ಶಾಖೆಯಲ್ಲಿ ಶುಲ್ಕಗಳನ್ನು ತಪ್ಪದೆ ಪಾವತಿಸಿರಬೇಕು. ಪ್ರವೇಶಾತಿ ಅನುಮೋದನೆ ಪಟ್ಟಿಯೊಂದಿಗೆ ಈ ವಿಶ್ವವಿದ್ಯಾನಿಲಯಕ್ಕೆ ಹಣ ಸಂದಾಯದ ಸಂಬಂಧ ದಾಖಲೆ ಸಲ್ಲಿಸಬೇಕು.

**ಪು.ತಿ.ನೋ**

| ಕ್ರಮ ಸಂಖ್ಯೆ | ಖಾತೆ ಹೆಸರು ಮತ್ತು ಖಾತೆ ಸಂಖ್ಯೆ | ಶುಲ್ಕಗಳ ಪಾವತಿ ವಿವರ |
|---|---|---|
| 1 | Collaboration Courses A/c No. 54007592690 | ಸಹೋದ್ಯಮ ಕೋರ್ಸ ಶುಲ್ಕ |

**8.** ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕಾಗಿರುವ ದಾಖಲಾತಿಗಳು (ಅನುಕ್ರಮವಾಗಿ ಜೋಡಿಸಿದ).

8.1 ನಾಲ್ಕು ಪ್ರತಿಗಳಲ್ಲಿ ತಯಾರಿಸಿರುವ ಹಾಗೂ ಪ್ರಾಂಶುಪಾಲರು ದೃಢೀಕರಿಸಿರುವ ಪ್ರವೇಶ ನಮೂನೆಗಳು I, II, III, IV, V, VI, VII, VIII, IX ಮತ್ತು X ರ ಜೊತೆಗೆ.

8.2 ಪಿ.ಯು.ಸಿ./ಜೆ.ಓ.ಸಿ./ITI/ Diploma/ ತತ್ಸಮಾನ ವಿದ್ಯಾರ್ಹತೆಯ ಮೂಲ ಅಂಕಪಟ್ಟಿ (ಎಲ್ಲಾ ವಿದ್ಯಾರ್ಥಿಗಳು).

8.3. ಮೂಲ ಅರ್ಹತಾ ಪ್ರಮಾಣ ಪತ್ರ (ಹೊರ ರಾಜ್ಯ/ವಿದೇಶಿ/ಎನ್.ಆರ್.ಐ.ಅಭ್ಯರ್ಥಿಗಳಿಗೆ ಮಾತ್ರ).

8.4 ಇತರೆ ದಾಖಲಾತಿಗಳು (ಪ್ರವೇಶಕ್ಕೆ ಸಂಬಂಧಿಸಿದಂತೆ).

8.5 ಕೊನೆಯ ದಿನಾಂಕಗಳವರೆಗಿನ ಒಟ್ಟು ಶುಲ್ಕವನ್ನು ಜಮಾ ಮಾಡಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯಲ್ಲಿನ ಚಲನ್‌ಗಳನ್ನು ಆಯಾ ಕಾಲೇಜಿಗೆ ಸಂಬಂಧಿಸಿದ ವಿಷಯ ನಿರ್ವಾಹಕರು ಖುದ್ದಾಗಿ ಬಂದು ವಿಶ್ವವಿದ್ಯಾನಿಲಯದಿಂದ ಮೇಲಿನ 8.1 ರಿಂದ 8.5 ರವರೆಗಿನ ದಾಖಲಾತಿಗಳನ್ನು ಕೊಟ್ಟು ಸ್ವೀಕೃತಿ ಪಡೆಯಬೇಕು.

| ಕ್ರ.ಸಂ | ಜಿಲ್ಲೆ | ಸ್ವೀಕರಿಸುವ ಸ್ಥಳ | ಸ್ನಾತಕ ಪದವಿಗೆ | ಸ್ನಾತಕೋತ್ತರ ಪದವಿಗೆ |
|---|---|---|---|---|
| 01 | ಮೈಸೂರು | ಮೈಸೂರು ವಿಶ್ವವಿದ್ಯಾನಿಲಯ ಆಡಳಿತ ಶಾಖೆಯ ಶೈಕ್ಷಣಿಕ ವಿಭಾಗ | ದಿನಾಂಕ **01.08.2019** ರಿಂದ **14.08.2019** | ದಿನಾಂಕ **26.08.2019** ರಿಂದ **05.09.2019** |

**9.** ಪ್ರವೇಶ ವಿಧಿ ವಿಧಾನಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ಈ ಬಗ್ಗೆ ವಿಶ್ವವಿದ್ಯಾನಿಲಯದ ನಿಯಮಗಳನ್ನು ಉಲ್ಲಂಘಿಸದಂತೆ ಕ್ರಮವಹಿಸುವುದು.

**10.** ಯು.ಜಿ.ಸಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಲೋಕ ಸಭೆಯ ಸದಸ್ಯರುಗಳು ಆಗಿಂದಾಗ್ಗೆ ಕೋರುವ ಒಟ್ಟು ವಿದ್ಯಾರ್ಥಿಗಳ(ಜಾತಿ/ಉಪಜಾತಿ/ವರ್ಗಾವಾರು) ಸಂಖ್ಯೆಗಳನ್ನು ಇತರೆ ಅಂಶಗಳನ್ನು ಒದಗಿಸುವ ನಮೂನೆಗಳಲ್ಲಿ ಅಂಕಿ ಅಂಶಗಳ ಮಾಹಿತಿಗಳನ್ನು ಖಚಿತವಾಗಿ ನೀಡಬೇಕು. ಕಾಲೇಜಿನಿಂದ ನೀಡಿದ ಮಾಹಿತಿಯಲ್ಲಿ ತಪ್ಪುಗಳಿದ್ದಲ್ಲಿ ಪ್ರಾಂಶುಪಾಲರೆ ಹೊಣೆಗಾರರಾಗಿರುತ್ತಾರೆ.

**11.** ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 61ರಂತೆ ಪ್ರವೇಶಾತಿ ಅನುಮೋದನೆಯಾಗದ ವಿದ್ಯಾರ್ಥಿಗಳನ್ನು ಪರೀಕ್ಷೆ ತೆಗೆದುಕೊಳ್ಳಲು ಅರ್ಹರಾಗಿರುವುದಿಲ್ಲ. ಈ ಅಂಶವನ್ನು ಕಾಲೇಜಿನ ಪ್ರಾಂಶುಪಾಲರು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಮು.ತಿ.ನೋ

ಮೇಲಿನ ಎಲ್ಲಾ ಸೂಚನೆ/ನಿಯಮಗಳನ್ನು ಕಾಲೇಜು/ಸಂಸ್ಥೆಯವರು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

**ಕುಲಸಚಿವರಿಂದ ಕರಡು ಅನುಮೋದಿಸಿದೆ.**

ಉಪ ಕುಲಸಚಿವ(ಶೈಕ್ಷಣಿಕ)

ಇವರಿಗೆ:

1. ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿ ಒಳಗೆ ಎಲ್ಲಾ Specialized/Specified Programಗಳ ಸ್ನಾತಕಪದವಿ/ಸ್ನಾತಕೋತ್ತರ ಪದವಿ ಕಾಲೇಜುಗಳ/ಸಂಸ್ಥೆಗಳ ಪ್ರಾಂಶುಪಾಲರುಗಳಿಗೆ/ಅಧ್ಯಕ್ಷರುಗಳಿಗೆ– ಸೂಕ್ತ ಕ್ರಮಕ್ಕಾಗಿ.

2. ಕುಲಸಚಿವ(ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – ಪ್ರವೇಶಾತಿ ಅನುಮೋದನೆಯಾದ ವಿದ್ಯಾರ್ಥಿಗಳಿಗೆ ಮಾತ್ರ ಪರೀಕ್ಷಾ ಪ್ರವೇಶ ಪತ್ರಗಳನ್ನು ವಿತರಿಸುವಂತೆ ಸಂಬಂಧಿಸಿದವರಿಗೆ ಸೂಚಿಸಲು ತಿಳಿಸಿದೆ.

3. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–ದಿನಾಂಕ:21-07-2017ರ ತಮ್ಮ ಕಛೇರಿ ಟಿಪ್ಪಣಿಯನುಸಾರ ಸಂಬಂಧಿಸಿದ ಸಹೋದ್ಯಮ ಕೋರ್ಸ (Collaboration Courses) ಖಾತೆಗೆ ಶುಲ್ಕಗಳನ್ನು ಪಾವತಿಸುವಂತೆ ಕಾಲೇಜುಗಳಿಗೆ/ ಅಧ್ಯಕ್ಷರುಗಳಿಗೆ ತಿಳಿಸಲಾಗಿದೆ. ಆದಾಗ್ಯೂ ಸಹೋದ್ಯಮ ಕೋರ್ಸ (Collaboration Courses) ಖಾತೆಗೆ ಅನುಗುಣವಾಗಿ ಚಲನ್‌ಅನ್ನು ತಕ್ಷಣ ಮುದ್ರಿಸಿ ಸಂಬಂಧಪಟ್ಟ ಬ್ಯಾಂಕುಗಳಿಗೆ ಒದಗಿಸಲು ತಿಳಿಸಿದೆ.

4 ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ/ವಾಣಿಜ್ಯ, ಕಲಾ ಮತ್ತು ಕಾನೂನು ನಿಕಾಯ, ಮೈ.ವಿ.ವಿ. ನಿಲಯ, ಮೈಸೂರು.

5 ನಿರ್ದೇಶಕರು, ಪಿ.ಎಂ.ಇ.ಬೋರ್ಡ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

6 ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೌಲ್ಯ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮಾ.ಗಂ., ಮೈಸೂರು.

7 ನಿರ್ದೇಶಕರು, ಅಂತರಾಷ್ಟ್ರೀಯ ಕೇಂದ್ರ, ವಿಶ್ವವಿದ್ಯಾನಿಲಯ ಲಲಿತ ಕಲೆಗಳ ಕಾಲೇಜು ಆವರಣ, ಮಾ.ಗಂ., ಮೈಸೂರು.

8 ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನ ವಿಭಾಗ, ಮಾನಸಗಂಗೋತ್ರಿ, ಮೈಸೂರು.

9 ಡಾ.ಸುರೇಶ್ ಕುಮಾರ್, ಸಂಯೋಜಕರು. ಐಸಿಡಿ, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾ.ಗಂ., ಮೈಸೂರು.– ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕಾಗಿ ಕೋರಿದೆ.

10 ಉಪಕುಲಸಚಿವ/ಅಧೀಕ್ಷಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿಶೇಷ ಘಟಕ, ಮಹಾರಾಜ ಕಾಲೇಜು ಶತಮಾನೋತ್ಸವ ಭವನ ಕಟ್ಟಡ, ಮೈವಿವಿ, ಮೈಸೂರು.

11 ಸಂಬಂಧಪಟ್ಟ ಎಲ್ಲಾ ಉಪಕುಲಸಚಿವ/ಸಹಾಯಕಕುಲಸಚಿವ/ಅಧೀಕ್ಷಕರು ಶೈಕ್ಷಣಿಕ ವಿಭಾಗದ ಎಲ್ಲಾ ವಿಷಯ ನಿರ್ವಾಹಕರಿಗೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

12 ಮಾನ್ಯ ಕುಲಪತಿ/ ಕುಲಸಚಿವ/ ಕುಲಸಚಿವ(ಪರೀಕ್ಷಾಂಗ)/ ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

13 ಕಛೇರಿ ಪ್ರತಿ.